# ಕರ್ನಾಟಕ ವಿಧಾನ ಪರಿಷತ್ತು

| | | | |
|---|---|---|---|
| 1 | ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 458 |
| 2 | ಸದಸ್ಯರ ಹೆಸರು | : | ಶ್ರೀ ಎನ್. ರವಿಕುಮಾರ್ (ವಿಧಾನ ಸಭೆಯಿಂದ ಚುನಾಯಿತರಾದವರು) |
| 3 | ಉತ್ತರಿಸುವ ದಿನಾಂಕ | : | 16-02-2023 |
| 4 | ಉತ್ತರಿಸುವವರು | : | ಮುಖ್ಯಮಂತ್ರಿಗಳು |

| ಕ್ರ.ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ಬೆಂಗಳೂರು ನಗರ ಜಿಲ್ಲೆ ಉತ್ತರ ತಾಲ್ಲೂಕಿನ ಹೆಣ್ಣೂರು ಗ್ರಾಮದ ಕಸಬಾ ಹೋಬಳಿಯ ಹೆಚ್.ಬಿ.ಆರ್. 5ನೇ ಬ್ಲಾಕ್ ಸರ್ವೇ ನಂ. 100/10 ಮತ್ತು 100/11 ರಲ್ಲಿ ವೆಲ್‌ಫೇರ್ ಟ್ರಸ್ಟ್‌ನವರಿಗೆ ವಸತಿ ಕಟ್ಟಡ ನಿರ್ಮಿಸಲು ಯಾವ ನಿಯಮದ ಅನ್ವಯ ಅನುಮತಿ ನೀಡಲಾಗಿದೆ; ವಸತಿ ಕಟ್ಟಡವನ್ನು ನಿರ್ಮಿಸಲು ಯಾವ ಸಂಸ್ಥೆಗಳಿಗೆ ಅನುಮತಿ ನೀಡಬಹುದು; ಟ್ರಸ್ಟ್‌ನವರು ಯಾವ ಉದ್ದೇಶಕ್ಕಾಗಿ ವಸತಿ ಕಟ್ಟಡ ನಿರ್ಮಿಸಲು ಅನುಮತಿ ಕೋರಿರುತ್ತಾರೆ; ವಸತಿ ಕಟ್ಟಡವನ್ನು ನಿರ್ಮಿಸಲು ಇರುವ ನಿಯಮಗಳೇನು; (ವಿವರ ನೀಡುವುದು) | ➢ ಬೆಂಗಳೂರು ನಗರ ಜಿಲ್ಲೆ ಉತ್ತರ ತಾಲ್ಲೂಕಿನ ಹೆಣ್ಣೂರು ಗ್ರಾಮದ ಕಸಬಾ ಹೋಬಳಿಯ ಹೆಚ್.ಬಿ.ಆರ್. 5ನೇ ಬ್ಲಾಕ್ ಸರ್ವೇ ನಂ. 100/10 ಮತ್ತು 100/11ರ ಪ್ರದೇಶವನ್ನು ಪರಿಷ್ಕೃತ ಮಹಾ ಯೋಜನೆ-2015ರ ಪ್ರಕಾರ ಹೊರಮಾವು 3.11(a)ರ ನಕ್ಷೆಯಲ್ಲಿ ವಸತಿ ಮುಖ್ಯ ಪ್ರದೇಶಕ್ಕೆಂದು ಮೀಸಲಿರಿಸಿದೆ. ವಲಯ ನಿಬಂಧನೆ-2015 (Zoning Regulation-2015) ರ ನಿಯಮಗಳಡಿಯಲ್ಲಿ ವಸತಿ ಕಟ್ಟಡಗಳ ನಿರ್ಮಾಣಕ್ಕೆ ಅನುಮತಿ ನೀಡಲಾಗುತ್ತದೆ.<br><br>➢ ಯಾವುದೇ ಸ್ವತ್ತಿನ ಮಾಲೀಕರು / ಸಂಸ್ಥೆಯವರು ವಸತಿ ಕಟ್ಟಡ ನಿರ್ಮಿಸಲು ಪ್ರಸ್ತಾವನೆಗಳನ್ನು ಸಲ್ಲಿಸಿದಲ್ಲಿ ಪರಿಶೀಲಿಸಿ ವಸತಿ ಕಟ್ಟಡ ನಿರ್ಮಿಸಲು ಅನುಮತಿ ನೀಡಲಾಗುವುದು.<br><br>➢ ಲತಿಫೀಯಾ ವೆಲ್‌ಫೇರ್ ಟ್ರಸ್ಟ್ ರವರಿಗೆ ಒಂದು ಘಟಕದ ವಸತಿ ಕಟ್ಟಡ ನಿರ್ಮಿಸಲು ಅನುಮತಿ ನೀಡಲಾಗಿದೆ.<br><br>➢ ವಲಯ ನಿಬಂಧನೆ – 2015ರ ನಿಯಮ 4.1.2ರ ಪ್ರಕಾರ ಸ್ವತ್ತಿನ ಅಳತೆಯು 360 ಚದರ ಮೀಟರ್ ಹಾಗೂ ರಸ್ತೆಯ ಅಗಲದ ಅಳತೆ 12 ಮೀಟರ್ ಒಳಗೆ ಇದ್ದಲ್ಲಿ ಕಟ್ಟಡದ ಆವರಿತ ಪ್ರದೇಶ (Ground Coverage) 75% ಹಾಗೂ ನೆಲ ವಿಸ್ತೀರ್ಣ ಪ್ರಮಾಣ (FAR) 1.75 ರಂತೆ ವಸತಿ ಕಟ್ಟಡ ನಿರ್ಮಿಸಲು ಅವಕಾಶವಿರುತ್ತದೆ. ಈ ನಿಯಮಾವಳಿಗಳಂತೆ ಸ್ವತ್ತಿನ ಸಂಖ್ಯೆ: 43 2ನೇ ಮುಖ್ಯ ರಸ್ತೆ 38ನೇ ಅಡ್ಡ ರಸ್ತೆ, 1ನೇ ಹಂತ 5ನೇ ಬ್ಲಾಕ್ ಹೆಚ್.ಬಿ.ಆರ್. ಲೇಔಟ್ ಈ ಸ್ವತ್ತಿನಲ್ಲಿ ಏಕ ವಸತಿ ಕಟ್ಟಡ ನಿರ್ಮಿಸಲು ಅನುಮತಿಯನ್ನು ನೀಡಲಾಗಿದ್ದು, ಕಟ್ಟಡದ ಆವರಿತ ಪ್ರದೇಶವು 66% ಹಾಗೂ ನೆಲ ವಿಸ್ತೀರ್ಣ ಪ್ರಮಾಣವು 0.55 ಆಗಿರುತ್ತದೆ. |

| | | |
|---|---|---|
| ಆ) | ವಸತಿ ಕಟ್ಟಡ ನಿರ್ಮಿಸಲು ನೀಡಿದ ಅನುಮತಿಯಲ್ಲಿ ಮಸೀದಿಯನ್ನು ನಿರ್ಮಿಸುತ್ತಿರುವುದಾಗಿ ಎಷ್ಟು ದೂರುಗಳು ಸ್ವೀಕೃತವಾಗಿದೆ; ವಸತಿ ಉದ್ದೇಶಕ್ಕಾಗಿ ಪಡೆದ ಅನುಮತಿಯಲ್ಲಿ ಮಸೀದಿ ನಿರ್ಮಿಸುತ್ತಿರುವ ಕುರಿತು ಸರ್ಕಾರದ ನಿಲುವೇನು; ಎಷ್ಟು ವಿಸ್ತೀರ್ಣದ ಕಟ್ಟಡ ನಿರ್ಮಿಸಲು ಅನುಮತಿ ನೀಡಲಾಗಿದೆ? (ಸಮಗ್ರ ವಿವರ ನೀಡುವುದು) | ➢ ಪ್ರಸ್ತಾಪಿತ ಕಟ್ಟಡ ನಿರ್ಮಾಣ ಹಾಗೂ ಬಳಕೆಯ ವಿರುದ್ಧ 06 ದೂರುಗಳು ಸ್ವೀಕೃತವಾಗಿರುತ್ತವೆ.<br>➢ ವಸತಿ ಉದ್ದೇಶಕ್ಕೆ ಪರವಾನಿಗೆ ಪಡೆದು ಮಸೀದಿ ನಿರ್ಮಿಸಲು ವಲಯ ನಿಬಂಧನೆ–2015 ಹಾಗೂ ಕಟ್ಟಡಗಳ ಬೈಲಾ ನಿಯಮಗಳಡಿಯಲ್ಲಿ ಅವಕಾಶವಿರುವುದಿಲ್ಲ. ಈ ಹಿನ್ನಲೆಯಲ್ಲಿ, ಪ್ರಸ್ತಾಪಿತ ಕಟ್ಟಡದ ವಿರುದ್ಧ ವಲಯ ನಿಬಂಧನೆ–2015 ಹಾಗೂ ಕಟ್ಟಡಗಳ ಬೈಲಾ ನಿಯಮಗಳನ್ವಯ ಕ್ರಮವಹಿಸಲಾಗುತ್ತಿದೆ.<br>➢ ಪ್ರಸ್ತಾಪಿತ ಸ್ವತ್ತಿನಲ್ಲಿ ಏಕ ವಸತಿ ಕಟ್ಟಡ ನಿರ್ಮಿಸಲು ನಕ್ಷೆ ಮಂಜೂರಾತಿ ಸಂಖ್ಯೆ: BBMP/PRJ/ 7037/21-22 dtd: 19.01.2022 ರಂತೆ ನೆಲ ಮಹಡಿ + ಟೆರೇಸ್ ನಿರ್ಮಿಸಲು ಅನುಮತಿ ನೀಡಲಾಗಿದ್ದು, ಒಟ್ಟು ಕಟ್ಟಡ ನಿರ್ಮಿತ ವಿಸ್ತೀರ್ಣವು 196.16 ಚದರ ಮೀಟರ್ (2111.46 ಚದರ ಅಡಿ) ಗಳಷ್ಟು ಕಟ್ಟಡವನ್ನು ನಿರ್ಮಿಸಲು ಅನುಮತಿ ನೀಡಿದೆ. |

**ನಅಇ 85 ಎಂಎಸ್‌ಯು 2023**

(ಬಸವರಾಜ ಬೊಮ್ಮಾಯಿ)
ಮುಖ್ಯಮಂತ್ರಿ